ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ಮತದಾರರ ಮುಂದೆ ಅಭ್ಯರ್ಥಿಗಳು ಅಳುವುದೇಕೆ?*



ಅಳುವ ಕಡಲೊಳು ತೇಲಿ ಬರುತಲಿದೆ ಮತದ ಹಾಯಿದೋಣಿ!

ಎಸ್.ಎನ್.ಮಹಾಬಲರಾವ್, ಎನ್‌ಆರ್‌ಪುರ

*ಮಗಳ ಮದುವೆ ಮಾಡಿ ಎಂದರೆ ವಾಪಸ್ ಬಂದರೆ ಏನು ಮಾಡುವುದೆಂದು ಕೇಳುತ್ತಾರೆ...?*

ಮರಳಿ ಯತ್ನವ ಮಾಡು ಮನುಜ ಮಗಳು ಬಾಳುವ ತನಕ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಜನರ ಸೇವೆ ಮಾಡಲು ಈ ರಾಜಕಾರಣಿಗಳೇಕೆ ಈ ಪರಿಯ ಪೈಪೋಟಿ ಮಾಡುತ್ತಾರೆ?*

ಕೋಟಿಗಟ್ಟಲೆ 'ಸೇವಾಶುಲ್ಕ' ದೊರೆಯುತ್ತದಲ್ಲ!

ರತ್ನಾ ಅಶೋಕ ಗೊರವರ, ನವಲಗುಂದ

*ಮನುಷ್ಯನಿಗೂ ಪ್ರಾಣಿಗಳಂತೆ ನಾಲ್ಕು ಕಾಲುಗಳೇ ಇದ್ದಿದ್ದರೆ?*

ರಿಸ್ಟ್ ವಾಚ್ ಕಟ್ಟಿಕೊಳ್ಳಲು ಕಷ್ಟವಾಗುತ್ತಿತ್ತು!

ಅರಕೆರೆ ಪಿ. ಸುರೇಶ್, ಭದ್ರಾವತಿ

*ಹುಡುಗಿಯರೇಕೆ ಐಸ್‌ಕ್ರೀಂ ಅನ್ನು ತುಂಬಾ ಇಷ್ಟ ಪಡುತ್ತಾರೆ?*



ಅದೂ ಅವರಂತೆಯೇ ತಂಪಾಗಿಯೂ, ಸಿಹಿಯಾಗಿಯೂ ಇರುತ್ತದಲ್ಲ!

ನೇರಲಗುಡ್ಡ ಶಿವಕುಮಾರ್, ಶಿರಾ

*ಬೇಲೂರಿನ ಶಿಲಾಬಾಲಿಕೆಯರಿಗೂ, ಶ್ರವಣಬೆಳಗೊಳದ ಗೊಮ್ಮಟೇಶ್ವರನಿಗೂ ಇರುವ ಭಿನ್ನತೆ ಏನು?*

ಒಂದು ಶೃಂಗಾರ ಕಲೆ, ಇನ್ನೊಂದು ಕಲೆಯ ಶೃಂಗ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ದಾಂಪತ್ಯದಲ್ಲಿ ಜುಗುಪ್ಸೆ ಉಂಟಾದಾಗ ಗಂಡು ಸನ್ಯಾಸಿಯಾಗುತ್ತಾನೆ. ಆದರೆ ಹೆಣ್ಣು ಸನ್ಯಾಸಿನಿ ಆಗುವುದಿಲ್ಲ. ಏಕೆ?*

ಅವನು ಕಮಂಡಲ ಹಿಡಿದು ಹೊರಟಮೇಲೆ ಹೆಣ್ಣಿಗೆ ಇರುವೆಡೆಯೇ ನೆಮ್ಮದಿ ದೊರೆಯುವುದರಿಂದ!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ಪತಿಯಾದವನು ಪತ್ನಿಗಿಂತ ವಯಸ್ಸಿನಲ್ಲಿ ದೊಡ್ಡವನಿರಬೇಕೆಂಬ ನಿಯಮವನ್ನು ಸಮಾಜದಲ್ಲಿ ಆರಂಭಿಸಲು ಕಾರಣವೇನು?*

ಬೇರೇನೂ ಅರ್ಹತೆ ಇಲ್ಲದಿದ್ದರೆ ವಯಸ್ಸಿಗಾದರೂ ಮರ್ಯಾದೆ ಕೊಡಲಿ ಎಂದು!

ಎಚ್.ಆರ್. ದೇಸಾಯಿ, ರಾಯಚೂರು

*ರಕ್ತಕ್ಕೆ ಬೆಲೆ ಇದೆ. ರಕ್ತಸಂಬಂಧಕ್ಕೆ ಏಕೆ ಬೆಲೆ ಇಲ್ಲ?*

ಹಣದ ವಿಷಯ ಬಂದ ತಕ್ಷಣ father farther, brother bother ಮತ್ತು mother other ಆಗಿಬಿಡುವುದರಿಂದ!

ಎಂ.ಬಿ. ರಂಗಪ್ಪಶೆಟ್ಟಿ, ಮೋಕ

*ಎಲೆಕ್ಷನ್ ವೇಳೆ ಗಳಗಳನೆ ಅಪ್ಪ, ಮಗ ಅಳುವರಲ್ಲಾ, ರೈತರು ಆತ್ಮಹತ್ಯೆ ಮಾಡಿಕೊಂಡಾಗ ಎಲ್ಲಿ ಹೋಗಿತ್ತು ಈ ಡೋಂಗಿ ಅಳು?*

ಆಗ ಮನದಾಳದಲ್ಲಿ ಉಗಮವಾದ ಅಳು ನಿಧಾನವಾಗಿ ಮೇಲೇರೀ, ಏರೀ, ಕಣ್ಣಿನ ಮಟ್ಟಕ್ಕೆ ಈಗ ತಲುಪಿತಂತೆ!

ಕೆ.ಎಂ. ಲಿಂಗರಾಜು, ನಂಜನಗೂಡು

*ಸಾರಾಯಿ ಲಾಬಿಗೂ, ಸಾಹಿತ್ಯ ಲಾಬಿಗೂ ಇರುವ ವ್ಯತ್ಯಾಸವೇನು?*

ಸಾರಾಯಿ ಲಾಬಿಯಲ್ಲಿ ಸಾಹಿತ್ಯದ ವಾಸನೆ ಇರುವುದಿಲ್ಲ. ಆದರೆ...

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಹೆಣ್ಣು ಮದುವೆಯಾದ ನಂತರ ಗಂಡನಿಗಿಂತಲೂ ದಪ್ಪವಾಗಲು ಕಾರಣ?*

ಅದು ಹಾಗಲ್ಲ; ಅವಳು ಹಾಗೇ ಇರುತ್ತಾಳೆ, ರಿಂಗ್ ಮಾಸ್ಟರ್‌ನ ಕೈಗೆ ಸಿಲುಕಿ ಪುರುಷಸಿಂಹ ಬಡಕಲಾಗುವುದಷ್ಟೆ!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಕಾವೇರಿ ನಮ್ಮ ಹಕ್ಕು; ಆದರೂ ಈ ಜಯಕ್ಕಂದು ಕಿರಿಕ್ಕು. ಯಾಕೆ?*

ಮೇಲುಕೋಟೆಯ ನೀರೆಗೆ ಮಂಡ್ಯದ ನೀರೇ ರುಚಿಯಂತೆ!

## ಬಹುಮಾನಿತ ಪ್ರಶ್ನೆ

ಪವನ್‌ಕುಮಾರ್ ಜೋಶಿ, ಬಳ್ಳಾರಿ

*ಬುದ್ಧಿವಂತರಿಗೂ, ದಡ್ಡರಿಗೂ ಏನು ವ್ಯತ್ಯಾಸ?*

ಬುದ್ಧಿವಂತರು ಜೋತಿಷ್ಯ ಹೇಳುತ್ತಾ ಉದ್ಧಾರವಾಗುತ್ತಾರೆ, ದಡ್ಡರು ನಂಬಿ ಕೆಡುತ್ತಾರೆ.

ಎಸ್.ಜಿ. ಕರನಂದಿ, ವಿದ್ಯಾನಗರ

*ಕಾಡುಪ್ರಾಣಿಗಳಿಗೂ, ನಾಡ ಪ್ರಾಣಿಗಳಿಗೂ ಇರುವ ಅಂತರವೇನು?*

ಕಾಡುಪ್ರಾಣಿ ಸ್ವಾವಲಂಬಿ; ನಾಡ ಪ್ರಾಣಿ ಗುಲಾಮ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ. ಗಂಡೊಂದು ಕಲಿತರೆ ಬಾರ್ ಒಂದು ತೆರೆದಂತೆಯೇ?*

ಅಲ್ಲ; ಆ ಶಾಲೆಗೊಬ್ಬ ಬಿಸಿ ಊಟ ತಯಾರಿಸುವ ಮೇಷ್ಟ್ರು ದೊರೆತಂತೆ!

ಆರ್. ಮಧುಸೂದನ್, ಹಾಸನ

*ಕೆನ್ನೆಗೆ ಹೊಡೆದರೆ ಮತ್ತೊಂದು ಕೆನ್ನೆ ತೋರಿಸಬೇಕಂತೆ. ಕೆನ್ನೆಯನ್ನು ಚುಂಬಿಸಿದರೆ?*



ಸಿಸಿಟಿವಿ ಇಲ್ಲದ ಜಾಗದಲ್ಲಿ ನಿಲ್ಲಬೇಕಂತೆ!

ಮಂಜುನಾಥ ಎಸ್. ಗುಂಜೂರು

*ಪ್ರಾಣಿ, ಪಕ್ಷಿಗಳಿಗೆ ಆಗದ ಹೃದಯಾಘಾತ ನರಮನುಷ್ಯನಿಗೆ ಏಕೆ ಆಗುತ್ತದೆ?*

ಅವಕ್ಕೂ ಆಗುತ್ತಿತ್ತೇನೋ; ಆದರೆ ಅವು ಬೋಂಡ, ವಡೆ, ಕಬಾಬ್, ಇತ್ಯಾದಿ ಕೊಲೆಸ್ಟ್ರಾಲ್ ಭರಿತ ಆಹಾರ ಸೇವಿಸುವುದಿಲ್ಲವಲ್ಲ!

ಸಿ. ಹಾಲಸ್ವಾಮಿ, ಬೆಂಗಳೂರು

*ನಮೋ ಚಾಯ್‌ಗೆ ರಾಗಾ ಹಾಲು ಬೆರೆಸಿದರೆ ಹೇಗಿರುತ್ತೆ?*

ಇಟಲಿಯ ಪಾಸ್ತಾ ಜೊತೆ ಹೊಂದಾಣಿಕೆ ಆಗುವುದಿಲ್ಲವಂತೆ!

ಎಚ್.ಜಿ. ಜಗದೀಶ್, ಮೈಸೂರು

*ಪ್ರಪಂಚದಲ್ಲಿ ಬಹಳ ವೇಗವಾಗಿ ಪ್ರಸಾರವಾಗುವುದು ಯಾವುದು?*

ಅಶ್ಲೀಲ ಚಿತ್ರಗಳು, ಅಶ್ಲೀಲ ಸುದ್ದಿ.

■ ರಾಮ್